Draft
# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ-1472\2014\ಸನಿಕಾಸ-2 ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:21.9.2016

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

ವಿಷಯ: ಸರ್ಕಾರಿ ನೌಕರರಾದ (1) ಶ್ರೀ.ಚಂದ್ರ, ಹಿಂದಿನ ತಹಶೀಲ್ದಾರ್, ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆ (2) ಶ್ರೀ.ರಜನಿಕಾಂತ ರೆಡ್ಡಿ, ಹಿಂದಿನ ರಾಜಸ್ವ ನಿರೀಕ್ಷಕರು, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು (3) ಶ್ರೀ.ಎನ್.ಲಕ್ಷ್ಮಿನರಸಿಂಹಯ್ಯ, ಗ್ರಾಮಲೆಕ್ಕಾಧಿಕಾರಿ, ಬಿಸುವನಹಳ್ಳಿ ಗ್ರಾಮ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರು ಕರ್ತವ್ಯ ಲೋಪ/ದುರ್ವರ್ತನೆ ಎಸಗಿರುವ ಬಗ್ಗೆ.

approved.
2
21/9/16

*******

ಶ್ರೀ.ಗಂಗರಾಜ್ ಶಿರವಾರ, ವೀರಭದ್ರನಪಾಳ್ಯ 10ನೇ ವಾರ್ಡ್, ದೊಡ್ಡಬಳ್ಳಾಪುರ ನಗರ ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ.ಚಂದ್ರ, ಹಿಂದಿನ ತಹಶೀಲ್ದಾರ್, ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆ (2) ಶ್ರೀ.ರಜನಿಕಾಂತ ರೆಡ್ಡಿ, ಹಿಂದಿನ ರಾಜಸ್ವ ನಿರೀಕ್ಷಕರು, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು (3) ಶ್ರೀ.ಎನ್.ಲಕ್ಷ್ಮಿನರಸಿಂಹಯ್ಯ, ಗ್ರಾಮಲೆಕ್ಕಾಧಿಕಾರಿ, ಬಿಸುವನಹಳ್ಳಿ ಗ್ರಾಮ, ಕಸಬಾ ಹೋಬಳಿ, ದೊಡ್ಡಬಳ್ಳಾಪುರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ ಎದುರುದಾರ ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ

ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕು ಬಿಸುವನಹಳ್ಳಿ ಗ್ರಾಮ ಸ. ನಂ: 22, 23, 24 ಇವುಗಳು ಮೊದಲಿನಿಂದಲೂ ತಹಶೀಲ್ದಾರ್ ದೊಡ್ಡಬಳ್ಳಾಪುರ ಇವರ ಹೆಸರಿನಲ್ಲಿ ದಾಖಲಾಗಿದ್ದು ಆದರೆ ಸೆಪ್ಟಂಬರ್ 2012ರಲ್ಲಿ ಎದುರುದಾರರು ಅಕ್ರಮವಾಗಿ ಹಾಗೂ ಕಾನೂನು ಬಾಹೀರವಾಗಿ ಈ ಜಮೀನುಗಳನ್ನು ಎಂ.ಎಲ್. ಮುರಳಿಧರ ತಂದೆ ಎಂ.ಎಸ್. ಲಕ್ಷ್ಮಣ ಶಾಸ್ತ್ರೀ ಎಂಬುವವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಿದ್ದಾರೆ. ಆದ್ದರಿಂದ ಎದುರುದಾರರ ವಿರುದ್ಧ ಸೂಕ್ತ ಕ್ರಮ ಕೈಗೊಂಡು ಮೇಲ್ಕಾಣಿಸಿದ ಜಮೀನುಗಳನ್ನು ಪುನಃ ತಹಶೀಲ್ದಾರ್ ದೊಡ್ಡಬಳ್ಳಾಪುರ ಇವರ ಹೆಸರಿನಲ್ಲಿ ಖಾತೆ ಬದಲಾವಣೆ ಮಾಡಬೇಕೆಂದು ದೂರು ಸಲ್ಲಿಸಿದ್ದಾರೆ.

3) ಎದುರುದಾರ ನಂ:1 ರವರು ತಮ್ಮ ಆಕ್ಷೇಪಣೆಯಲ್ಲಿ ಸ. ನಂ: 22, 23, ಹಾಗೂ 24 ಇವುಗಳು ಮೂಲತಃ ಶಾನಬೋಗ ಇನಾಂ ಜಮೀನುಗಳಾಗಿದ್ದು ಬಿಸವನಹಳ್ಳಿ ಗ್ರಾಮದ ಶಾನುಬೋಗರಾಗಿದ್ದ ವೆಂಕಟರಾಯಪ್ಪ ಎಂಬುವವರು ಜಮೀನುಗಳನ್ನು ಅದಲು ಬದಲು ಮೂಲಕ ದಿ: 10.6.1954ರಲ್ಲಿ ಲಕ್ಷ್ಮಣ ಶಾಸ್ತ್ರೀ ತಂದೆ ಸೀತಾರಾಮಯ್ಯ ರವರಿಗೆ ನೀಡಿರುತ್ತಾರೆ. 1954 ರಲ್ಲಿ ಶ್ರೀ.ನಾಗೇಶಪ್ಪ ಎನ್ನುವವರು ಈ ಜಮೀನುಗಳಿಗೆ ಗೇಣಿದಾರರೆಂದು ಹಾಗೂ ಸುಬ್ರಮಣ್ಯಂ ಎಂಬುವವರಿಗೆ ಗುತ್ತಿಗೆ ಪಡೆದಿರುವುದಾಗಿ ಈ ಜಮೀನುಗಳಿಗೆ ಸಂಬಂಧಪಟ್ಟಂತೆ ತೊಂದರೆ ಮಾಡಿದ್ದರಿಂದ ಪೊಲೀಸರು ನಾಗೇಶಪ್ಪ ಮತ್ತು ಇತರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿದ್ದರು. ದೊಡ್ಡಬಳ್ಳಾಪುರ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್. ನಂ: 158/98ಅನ್ನು ದಾಖಲಿಸಿದ್ದು ಅದರಲ್ಲಿ ಉಭಯ ಪಕ್ಷಗಾರರು ರಾಜಿಯಾಗಿರುತ್ತಾರೆ. ಆ ಪ್ರಕಾರ ಲಕ್ಷ್ಮಣ ಶಾಸ್ತ್ರೀ ರವರಿಗೆ ಖಾತೆಯನ್ನು ಪುನಃ ಸ್ಥಾಪನೆ ಮಾಡಬೇಕೆಂದು ಆದೇಶವಾಗಿರುತ್ತದೆ. ಆದ್ದರಿಂದ ತಾನು ನ್ಯಾಯಾಲಯದ ಆಧೇಶದ ಪ್ರಕಾರ

ನಡೆದುಕೊಂಡಿದ್ದು ತಾನು ಯಾವುದೇ ಅಕ್ರಮ ಖಾತೆ ಬದಲಾವಣೆ ಮಾಡಿಲ್ಲವೆಂದು ತಿಳಿಸಿದ್ದಾರೆ.

4) ಎದುರುದಾರ ನಂ: 2 ಮತ್ತು 3 ರವರು ಎದುರುದಾರ ನಂ:1 ರವರ ಆಕ್ಷೇಪಣೆಗಳನ್ನೇ ಅಳವಡಿಸಿಕೊಂಡಿದ್ದಾರೆ.

5) ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನಲ್ಲಿನ ಅಂಶಗಳನ್ನು ಪುನರ್ ಉಚ್ಚರಿಸಿ ಎದುರುದಾರರು ಭ್ರಷ್ಟಾಚಾರದಲ್ಲಿ ತೊಡಗೆ ಅಕ್ರಮ ಖಾತೆ ಮಾಡಿದ್ದು ಆದ್ದರಿಂದ ಅವರ ವಿರುದ್ದ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಂಡಿದ್ದಾರೆ.

6) ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

**ಅ) "ಬಿಸವನಹಳ್ಳಿ ಗ್ರಾಮದ ಸ. ನಂ: 22, 23, ಹಾಗೂ 24ಇವುಗಳು ಪಹಣಿ ಪತ್ರಿಕೆಯ ಕಲಂ ನಂ: 9 ಮತ್ತು 12ರಲ್ಲಿ 2011–12ರವರೆಗೆ ತಹಶೀಲ್ದಾರ್ ದೊಡ್ಡಬಳ್ಳಾಪುರ ತಾಲ್ಲೂಕು ಇವರ ಹೆಸರಿನಲ್ಲಿ ಇರುವ ಬಗ್ಗೆ ದಾಖಲೆಗಳು ಕಂಡುಬರುತ್ತದೆ. ಆದರೆ ಈ ಜಮೀನುಗಳು ಎಂ.ಆರ್. ನಂ: ಹೆಚ್.4 ದಿ: 28.4.2012ರ ಪ್ರಕಾರ ಎಂ.ಎಸ್. ಲಕ್ಷ್ಮಣಾ ಶಾಸ್ತ್ರೀ ತಂದೆ ಸೀತಾರಾಮಯ್ಯ ರವರಿಂದ ಇವರ ಮಗ ಎಂ.ಎಲ್.ಮುರಳಿಧರ ತಂದೆ ಎಂ.ಎಸ್.ಲಕ್ಷ್ಮಣ ಶಾಸ್ತ್ರೀ ಇವರ ಹೆಸರಿನಲ್ಲಿ ಖಾತೆ ಬದಲಾವಣೆಯಾಗಿರುತ್ತದೆ. ಸ್ವಾಧೀನತೆಯ ರೀತಿ ಪೌತಿ ಅಂತ ನಮೂದಿಸಲಾಗಿದೆ.**

**ಆ) ಎದುರುದಾರರು ಹಾಜರುಪಡಿಸಿದ ಓ.ಎಸ್. ನಂ: 158/1998ರ ವಾದ ಪತ್ರದ ಧೃಢೀಕೃತ ನಕಲನ್ನು ಪರಿಶೀಲಿಸಿದಾಗ ಈ ದಾವೆಯನ್ನು ಎಂ.ಎಸ್. ಲಕ್ಷ್ಮಣ ಶಾಸ್ತ್ರೀ ಇವರು ಚೆನ್ನರಾಯಪ್ಪ, ರಾಮಚಂದ್ರಯ್ಯ, ಪ್ರಕಾಶ್ ಮತ್ತು ಮಂಜುನಾಥ ಇವರ ವಿರುಧ್ಧ ಗೋಷಣಾತ್ಮಕ ದಾವೆ ದಾಖಲಿಸಿದ್ದು ಕಂಡುಬರುತ್ತದೆ. ಆದರೆ ಈ ದಾವೆಯಲ್ಲಿ ತಹಶೀಲ್ದಾರ್ ದೊಡ್ಡಬಳ್ಳಾಪುರ ಇವರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಆದರೆ**

ಈ ವೇಳೆಯಲ್ಲಿ ಈ ಮೇಲ್ಕಾಣಿಸಿದ ಜಮೀನುಗಳು ತಹಶೀಲ್ದಾರ್ ದೊಡ್ಡಬಳ್ಳಾಪುರ ಇವರ ಹೆಸರಿನಲ್ಲಿ ಇರುವುದು ಕಂಡುಬರುತ್ತದೆ.

ಇ) ಎದುರುದಾರರ ಆಕ್ಷೇಪಣೆಯಲ್ಲಿನ ಅಂಶಗಳನ್ನು ಪರಿಶೀಲಿಸಿದಾಗ ಒ.ಎಸ್. ನಂ: 158/98ರ ದಾವೆಯಲ್ಲಿ ಎಂ.ಎಸ್. ಲಕ್ಷ್ಮಣ ಶಾಸ್ತ್ರೀ ಹಾಗೂ ಎದುರುದಾರರು ರಾಜಿಯಾಗಿದ್ದು ಆ ರಾಜಿ ಪ್ರಕಾರ ಪ್ರತಿವಾದಿಗಳಾದ ಚೆನ್ನರಾಯಪ್ಪ, ರಾಮಚಂದ್ರಯ್ಯ, ಪ್ರಕಾಶ್ ಮತ್ತು ಮಂಜುನಾಥ ಇವರು ಲಕ್ಷ್ಮಣ ಶಾಸ್ತ್ರೀ ಇವರ ಹೆಸರಿನಲ್ಲಿ ಖಾತೆಗಳನ್ನು ಪುನಃ ಸ್ಥಾಪನೆ ಮಾಡಲು ಒಪ್ಪಿಕೊಂಡು ರಾಜಿಯಾಗಿದ್ದಾರೆ. ಆದರೆ ಯಾವುದೇ ಪ್ರತಿಫಲಾಪೇಕ್ಷೇ ಇಲ್ಲದೆ ಇಂತಹ ಬೆಲೆ ಬಾಳುವ ಜಮೀನುಗಳನ್ನು ಎಂ.ಎಸ್. ಲಕ್ಷ್ಮಣ ಶಾಸ್ತ್ರೀ ಇವರಿಗೆ ಬಿಟ್ಟುಕೊಡಲು ಏಕೆ ಒಪ್ಪಿಕೊಂಡರು ಎಂಬುವುದನ್ನು ರಾಜಿ ಅರ್ಜಿಯಲ್ಲಿ ಅಥವಾ ಡಿಕ್ರಿಯಲ್ಲಿ ನಮೂದಿಸಿರುವುದಿಲ್ಲ. ಅಲ್ಲದೆ ತಹಶೀಲ್ದಾರ್ ದೊಡ್ಡಬಳ್ಳಾಪುರ ಇವರ ಹೆಸರಿನಲ್ಲಿರುವ ಜಮೀನುಗಳನ್ನು ಅವರನ್ನು ಪಕ್ಷಗಾರರನಾಗಿ ಮಾಡದೆ ಉಭಯ ಪಕ್ಷಗಾರರು ರಾಜಿ ಡಿಕ್ರಿ ಮಾಡಿಕೊಂಡ ಕಾನೂನು ಬದ್ದತೆಯನ್ನು ಎದುರುದಾರರು ಪ್ರಶ್ನಿಸದಿರುವುದು ಅವರ ಪ್ರಮಾಣಿಕತೆಯ ಮೇಲೆ ಸಂಶೆಯ ಉಂಟಾಗುತ್ತದೆ. ಈ ರಾಜಿ ಡಿಕ್ರಿಯ ಕಾನೂನು ಬದ್ದತೆಯ ಬಗ್ಗೆ ಎದುರುದಾರ ನಂ: 1 ರವರು ಕಾನೂನು ಅಭಿಪ್ರಾಯಪಡೆದಿರುವುದಿಲ್ಲ ಹಾಗೂ ಎದುರುದಾರ ನಂ;2 ಮತ್ತು 3 ರವರು ಹಕ್ಕು ಬದಲಾವಣೆ ಮಾಡುವ ವೇಳೆಯಲ್ಲಿ ಯಾವುದೇ ತಕರಾರು ವ್ಯಕ್ತಪಡಿಸಿರುವುದಿಲ್ಲ. ಎದುರುದಾರ ನಂ:1 ರಿಂದ 3 ರವರು ನ್ಯಾಯಾಲಯದ ಡಿಕ್ರಿಯನ್ನು ನೆಪಮಾಡಿಕೊಂಡು ಹಿಂದಿನ ದಾಖಲೆಗಳನ್ನು ಪರಿಶೀಲಿಸದೆ ಯಾವುದೇ ಪ್ರಭಾವಕ್ಕೆ ಒಳಗಾಗಿ ಎಂ.ಎಸ್. ಲಕ್ಷ್ಮಣಾ ಶಾಸ್ತ್ರೀ ರವರ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಿರುವುದು ಕಂಡುಬರುತ್ತದೆ. ಅಲ್ಲದೆ ಓ.ಎಸ್. ನಂ: 158/1998ರ ಉಭಯ ಪಕ್ಷಗಾರರು ನ್ಯಾಯಾಲಯಕ್ಕೆ ಸುಳ್ಳು ಮಾಹಿತಿ ನೀಡಿ ರಾಜಿ ಡಿಕ್ರಿ ಮಾಡಿಕೊಂಡಿದ್ದಾರೆಂದು ಸಂಶಯ ಉಂಟಾಗುತ್ತದೆ. ಆದ್ದರಿಂದ ದೂರುದಾರರು ಆಪಾದಿಸಿರುವಂತೆ

**ಎದುರುದಾರರು ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷ್ಯತೆ ಹಾಗೂ ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ."**

7. ಮೇಲ್ಕಂಡ ಅಂಶಗಳು, ಕಡತದ ಸಂಗತಿಗಳು ಹಾಗೂ ದಾಖಲಾತಿಗಳನ್ನು ಮತ್ತು 1 ರಿಂದ 3ನೇ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಿದಾಗ, ಸದರಿ 1 ರಿಂದ 3ನೇ ಎದುರುದಾರರು ತಮ್ಮ ವಿರುದ್ಧದ ನಡವಳಿಯನ್ನು ಕೈಬಿಡಲು ಸೂಕ್ತ/ಸಮಂಜಸ/ಸಮಾಧಾನಕರ ಕಾರಣ ತೋರಿಸಿಲ್ಲವೆಂಬ ಅಭಿಪ್ರಾಯಕ್ಕೆ ಬರಲಾಗಿದೆ.

8. ಕಡತದಲ್ಲಿಯ ಸಂಗತಿಗಳು ಹಾಗೂ ದಾಖಲಾತಿಗಳಿಂದ, 1 ರಿಂದ 3ನೇ ಎದುರುದಾರರು ಸರ್ಕಾರಿ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ಮತ್ತು ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡ ದುರ್ವರ್ತನೆ/ ದುರ್ನಡತೆ ಮೇಲ್ನೋಟಕ್ಕೆ ಕಂಡು ಬರುತ್ತದೆ.

9. ಅದಲ್ಲದೆ 1 ರಿಂದ 3ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)ರ ಅಡಿಯಲ್ಲಿ ದುರ್ನಡತೆ/ ದುರ್ವರ್ತನೆ ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ, ಹಾಗೂ 1ನೇ ಎದುರುದಾರರು ದಿನಾಂಕ:30.6.2015 ರಂದು ಈಗಾಗಲೇ ನಿವೃತ್ತಿ ಹೊಂದಿರುವುದರಿಂದ, **ಕೆಸಿಎಸ್‌ಆರ್ ನಿಯಮ 214(2)(ಬಿ)(i)ರ** ಅಡಿ ಇಲಾಖಾ ವಿಚಾರಣೆಗೆ ಅನುಮತಿಯನ್ನು ನೀಡಿ ಹಾಗೂ 1 ರಿಂದ 3ನೇ ಎದುರುದಾರರ ವಿರುದ್ಧದ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 14(ಎ) ರಡಿ ಈ ಸಂಸ್ಥೆಗೆ ವಹಿಸ ಬೇಕೆಂದೂ ಕೋರಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ, ಏಕೆಂದರೆ 1ನೇ ಎದುರುದಾರರು ದಿನಾಂಕ:30.6.2015ರಂದು ನಿವೃತ್ತಿ ಹೊಂದಿದ್ದಾರೆ.

**[ ನ್ಯಾಯಮೂರ್ತಿ ಸುಭಾಷ್ ಬಿ ಆಡಿ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ.**